for repairing. As Hon. Minister for Education said, the Government will try to expedite it.

SHIFTING OF BANGALORE GOLF CLUB

23. Sri K. R. SRINIVASULU NAYUDU (Shanthinagar).—

Will the Minister for Public Works and Electricity be pleased to state :—

Whether there is any proposal before Government to shift the Bangalore Golf Club to some other place, preferably outside the Corporation area and making use of this place for construction of Government buildings to locate the offices which have been scattered throughout Bangalore ?

Sri H. M. CHANNABASAPPA (Minister for Public Works and Electricity).—

There is no such proposal.

ಶ್ರೀ ಕೆ. ಆರ್. ಶ್ರೀನಿವಾಸಲು ನಾಯ್ಡು.—ನನ್ನ ಪ್ರಶ್ನೆಗೆ ಉತ್ತರವಾಗಿ, ಅಂಥ ಸಲಹೆ ಏನೂ ಇರುವುದಿಲ್ಲ ಎಂದು ಹೇಳಿದ್ದೀರಿ. ಇದಕ್ಕೆ ಇರತಕ್ಕ ಪ್ರಾಕ್ಟಿಕಲ್ ಡಿಫಿಕಲ್ಟಿ ಏನು? ಅಲ್ಲಿ ಎಷ್ಟು ಜಮೀನು ಇದೆ? ಅದು ಯಾರಿಗೆ ಸೇರಿದೆ?

ಶ್ರೀ ಎಚ್. ಎಂ. ಚನ್ನಬಸಪ್ಪ.—೬೦ ಎಕರೆ ೧೫ ಗುಂಟೆ ಇರತಕ್ಕದ್ದು, ಅದು ಸರ್ಕಾರಿ ಜಮೀನು.

ಶ್ರೀ ಕೆ. ಆರ್. ಶ್ರೀನಿವಾಸಲು ನಾಯ್ಡು.—ಅದನ್ನು ಯಾರಿಗೋ ಒಬ್ಬರಿಗೆ ಲೀಸ್‌ಗೆ ಕೊಟ್ಟಿದ್ದೀರಿ ಎಂದು ಗೊತ್ತಾಯಿತು. ಈಗ ಕಟ್ಟಡಗಳ ಅಭಾವವಿರುವುದರಿಂದ ಆ ಲೀಸನ್ನು ಕ್ಯಾನ್ಸಲ್‌ಮಾಡಿ ಜಮೀನು ವಾಪಸ್ ತೆಗೆದುಕೊಳ್ಳಲು ಸರ್ಕಾರದವರು ಪ್ರಯತ್ನ ಮಾಡುತ್ತೀರಾ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಸರ್ಕಾರ ಯಾರೋ ಒಬ್ಬರಿಗೆ ಕೊಟ್ಟಿಲ್ಲ, ಗಾಲ್ಫ್ ಕ್ಲಬ್‌ಗೆ ಲೀಸ್‌ಗೆ ಕೊಟ್ಟಿದ್ದೇನೆ. ಹಿಂದೆ ೫೦ ವರ್ಷಗಳ ಅವಧಿಗೆ ಕೊಟ್ಟಿದ್ದರು. ೧೯೪೩ ರಿಂದ ಯಾವ ದಾಖಲೆಯೂ ಇರಲಿಲ್ಲ. ೧೯೨೦ನೇ ಇಸವಿಯಲ್ಲಿ ೬೦ ಎಕರೆ ೧೫ ಗುಂಟೆ ಗಾಲ್ಫ್ ಕ್ಲಬ್‌ಗೆ ೫೦ ವರ್ಷಗಳವರೆಗೆ ಲೀಸ್‌ಗೆ ಕೊಟ್ಟಿದ್ದರು. ಈಗ ಸರ್ಕಾರ ಪುನಃ ೨-೭-೧೯೭೧ ರಲ್ಲಿ for a further period of 50 years on a rent of Rs. 100/—per year Government Order ಮೇಲೆ ಲೀಸ್‌ಗೆ ಕೊಟ್ಟಿದೆ.

ಶ್ರೀ ಎಂ. ಎನ್. ಕೃಷ್ಣನ್.—ಆ ಪ್ರದೇಶ ಪಾರ್ಕಾಗಿ ಮಾಡುವುದಕ್ಕೆ ಅನುಕೂಲವಾಗಿರುವುದರಿಂದ, ಪುನಃ ಗಾಲ್ಫ್ ಕ್ಲಬ್‌ಗೆ ಕೊಡುವುದನ್ನು ಕೈಬಿಟ್ಟು ಗಾಲ್ಫ್ ಕ್ಲಬ್‌ನವರಿಗೆ ಹೊರಗಡೆ ಬೇರೆ ಕಡೆ ಅವಕಾಶ ಮಾಡಿಕೊಡುತ್ತೀರಾ?

ಶ್ರೀ ಎಚ್. ಎಂ. ಚನ್ನಬಸಪ್ಪ —ಅವರು ಕೇಳಿರತಕ್ಕದ್ದು ಆಫೀಸುಗಳಿಗೆ ಕಟ್ಟಡಗಳನ್ನು ಮಾಡಿಕೊಡಬೇಕು ಎಂದು. ಅದಕ್ಕೆ ಉತ್ತರವಾಗಿ ಹೇಳಿದೆ.

ಶ್ರೀ ಎಂ. ಎಸ್. ಕೃಷ್ಣನ್.—ನಾನು ಕೇಳಿದ್ದು, ಲಂಗ್‌ಸ್ಪೇಸ್ ಇರಬೇಕು. ಗಾಲ್ಫ್ ಕ್ಲಬ್‌ಗೆ ಬೇರೆ ಕಡೆ ಕೊಡಿ ಎಂದು.

ಶ್ರೀ ಎಚ್. ಎಂ. ಚನ್ನಬಸಪ್ಪ.—ಲಂಗ್‌ಸ್ಪೇಸನ್ನು ಉಳಿಸಿಕೊಂಡಿದ್ದೇವೆ. ಲಂಗ್‌ಸ್ಪೇಸ್ ತೆಗೆದುಹಾಕಿ ಕಟ್ಟಡ ಕಟ್ಟಬೇಕು ಎಂದು ಅವರು ಹೇಳಿದ್ದಾರೆ. ನಾವು ಲಂಗ್‌ಸ್ಪೇಸ್ ಬೇಕು, ಕಟ್ಟಡ ಕಟ್ಟಬಾರದು ಎಂದು ಇದ್ದೇವೆ.

ಶ್ರೀ ಎಂ. ಎಸ್. ಕೃಷ್ಣನ್.—ಅದು ಗಾಲ್ಫ್ ಕ್ಲಬ್‌ಗೆ ಸೇರಿದೆ; ಲಂಗ್‌ಸ್ಪೇಸ್ ಇಲ್ಲ. Only rich people can go there.

Sri H. M. CHANNABASAPPA.—You can also enjoy the free air there.

ಶ್ರೀ ಕೆ. ಆರ್. ಶ್ರೀನಿವಾಸಲು ನಾಯ್ಡು.—ನನ್ನ ಮಿತ್ರರು ಹೇಳಿದಹಾಗೆ ಗಾಲ್ಫ್ ಆಡುವವರಿಗೆ ಅದು ಲಂಗ್‌ಸ್ಪೇಸ್ ಆಗುತ್ತದೆ. ೫೦ ವರ್ಷಗಳಿಗೆ ಲೀಸ್ ಕೊಟ್ಟಿದ್ದೀರಿ. ಇದನ್ನು ಪುನರ್ ಪರಿಶೀಲನೆ ಮಾಡಿ ಸಾರ್ವಜನಿಕ ದೃಷ್ಟಿಯಿಂದ, ಸರ್ಕಾರದ ದೃಷ್ಟಿಯಿಂದ ಆ ಜಮೀನನ್ನು ಸರ್ಕಾರದ ವಶಕ್ಕೆ ತೆಗೆದುಕೊಂಡು ಸದುಪಯೋಗ ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಕೃಷ್ಣನ್‌ರವರು ಹೇಳುವುದರಲ್ಲಿ ಅರ್ಥವಿದೆ. ಬೆಂಗಳೂರು ಬೆಳೆಯುತ್ತಾ ಇದೆ. ಕಂಜೆಷನ್ ಹೆಚ್ಚಾಗುತ್ತಾ ಇದೆ. ಫ್ರೀ ಏರ್ ಇರಬೇಕು. ಲಂಗ್‌ಸ್ಪೇಸ್ ಸಿಟಿ ಮಧ್ಯ ಭಾಗದಲ್ಲಿ ಇರುವುದು ಒಳ್ಳೆಯದು ಎಂದು ಹೇಳುತ್ತಿದ್ದಾರೆ. ಅದನ್ನು ಒಪ್ಪಿಕೊಳ್ಳಬಹುದು. ಈಗ ಇರುವ ಕಿಷ್ಕಿಂದವನ್ನು ಪರ್ಮನೆಂಟ್ ಕಿಷ್ಕಿಂದ ಮಾಡುವುದು ಸಿಟಿ ಬೆಳವಣಿಗೆ ಮತ್ತು ಆರೋಗ್ಯದ ದೃಷ್ಟಿಯಿಂದ ಒಳ್ಳೆಯದಲ್ಲ ಎಂದು ನನ್ನ ಅಭಿಪ್ರಾಯ.

ಶ್ರೀ ಕೆ. ಎನ್. ವೀರಪ್ಪಗೌಡ.—ಸ್ವಾಮಿ, ಈಗ ಗಾಲ್ಫ್ ಕ್ಲಬ್‌ಗೆ ಸೇರಿದ ಸುಮಾರು ೬೦ ಚಿಲ್ಲರೆ ಎಕರೆ ಜಮೀನನ್ನು ಒಂದು ಸಾರಿ ೫೦ ವರ್ಷಕ್ಕೆ ಲೀಸ್ ಕೊಟ್ಟು ಮತ್ತೆ ಪುನಃ ಅದನ್ನು ವರ್ಷ ಒಂದಕ್ಕೆ ೧೦೦ ರೂಪಾಯಿಯಂತೆ ಲೀಸ್ ಬೇಸಿಸ್ ಮೇಲೆ ಕೊಟ್ಟಿದೆ ಎಂದು ಹೇಳುತ್ತೀರಾ? ಮತ್ತು ಅಲ್ಲಿಗೆ ಯಾರು ಹೋಗುತ್ತಾರೆ ಎಂದರೆ ದೊಡ್ಡ ದೊಡ್ಡವರು ಕಾರು ಇಟ್ಟುಕೊಂಡವರು ಮತ್ತು ಐಶ್ವರ್ಯವಂತರು ಹೋಗುತ್ತಾರೆ. ಅಲ್ಲದೆ ಇಂಥ ಕಾಲದಲ್ಲಿ ಅವರಿಗೆ ಈ ರೀತಿ ಕೊಡುವುದೇ

ತಪ್ಪು. ಆದರೂ ಕೂಡ ಇದನ್ನು ಪುನರ್‌ಪರಿಶೀಲಿಸಿ ಈ ಲೀಸ್ ಮೊಬಲಗನ್ನು ಜಾಸ್ತಿ ವಸೂಲ್ಮಾಡುವುದಕ್ಕಾಗುವುದಿಲ್ಲವೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.— ತಾವು ಹೇಳಿರತಕ್ಕಂಥಾದ್ದರಲ್ಲಿ ಸ್ವಲ್ಪ ಮಟ್ಟಿಗೆ ಅರ್ಥ ಅದೆ ಆದುದರಿಂದ ಇದರ ಸತ್ಯಾಸತ್ಯತೆಗಳನ್ನು ಸರಕಾರ ಪರಿಶೀಲನೆ ಮಾಡುತ್ತದೆ.

RAISING THE HEIGHT ON ANKASANDRA ANE

34. Sri N. BASAVAIAH (Chickanayakanahalli).— Will the Minister for Public Works and Electricity be pleased to state :—

(*a*) whether it has come to the notice of the Government that water is being wasted in Ankasandra Ane in Chikkanayakanahally Taluk, due to non-construction of channels, where about 300 acres of land could have been irrigated and brought under cultivation;

(*b*) when Government intends to take up this work and complete it;

(*c*) whether the Government has received any representations from the public for rising height of this Ane by another three feet;

(*d*) if so, the action taken by Government in this matter ?

Sri H. M. CHANNABASAPPA (Minister for Public Works and Electricity).—

(*a*) The construction of Ankasandra Ane is not completed in all respects. Therefore the question of water being wasted does not arise. Construction of the channel is also taken up. An extent of 623 acres of coconut garden is indirectly benefited already.

(*b*) Action is being taken to complete the balance work through another agency since the tendered contractor has stopped the work. The work will be completed as early as possible after the fixing up an agency.